ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ: ಕವಿಪ್ರನಿನಿ/ ಬಿ4/67221/17-18

ದಿನಾಂಕ : 5 MAY 2020

ವ್ಯವಸ್ಥಾಪಕ ನಿರ್ದೇಶಕರು,
ವಿದ್ಯುತ್ ಸರಬರಾಜು ಕಂಪನಿಗಳು.
ಬೆಂಗಳೂರು/ಮೈಸೂರು/ಮಂಗಳೂರು/ಕಲಬುರಗಿ/ಹುಬ್ಬಳ್ಳಿ

ಮಾನ್ಯರೆ,

ವಿಷಯ: ರಕ್ತದಾನ ಶಿಬಿರಗಳನ್ನು ಆಯೋಜಿಸುವ ಕುರಿತು.

--*--

ಪ್ರಸ್ತುತ ಕೋವಿಡ್-19 ಪ್ರಪಂಚದಾದ್ಯಂತ ಸಾಂಕ್ರಮಿಕ ರೋಗವಾಗಿ ಪರಿಣಮಿಸಿ ಸಮಾಜವನ್ನು ವ್ಯಾಪಕವಾಗಿ ಭಾದಿಸುತ್ತಿದ್ದು ಭಾರತವು ಈ ಪಿಡುಗನ್ನು ನಿರ್ಮೂಲನೆ ಮಾಡುವ ದೃಷ್ಟಿಯಿಂದ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುವುದರೊಂದಿಗೆ ಆಯಾ ಸರ್ಕಾರಗಳಿಗೆ ನಿರ್ದಿಷ್ಟ ಮಾರ್ಗಸೂಚಿಗಳನ್ನು ನೀಡುವುದರೊಂದಿಗೆ ಲಾಕ್ ಡೌನ್ ಅನ್ನು ವಿಧಿಸಿರುವುದು ಎಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ಕೋವಿಡ್-19 ಪಿಡುಗಿನ ಕಾರಣಕ್ಕೆ ಲಾಕ್ ಡೌನ್ ವಿಧಿಸಿರುವ ಕ್ರಮಗಳಿಂದ ಸಮಾಜದಲ್ಲಿ ಪ್ರತಿಯೊಬ್ಬ ನಾಗರೀಕನು ಸಾಮಾಜಿಕ ಅಂತರ ಕಾಯ್ದುಕೊಳ್ಳುವುದರೊಂದಿಗೆ ಕೊರೋನ ವೈರಸನ್ನು ವ್ಯಕ್ತಿಯಿಂದ ವ್ಯಕ್ತಿಗೆ ಹರಡುವ ಸಂಖ್ಯೆಯನ್ನು ಕಡಿಮೆ ಮಾಡುವ ಉದ್ದೇಶದೊಂದಿಗೆ ವೈರಸ್‌ನ ಕೊಂಡಿಯನ್ನು ಕಳಚುವುದಾಗಿರುತ್ತದೆ. ಈ ಲಾಕ್ ಡೌನ್ ಸಂದಿಗ್ಧ ಸ್ಥಿತಿಯನ್ನು ಕರ್ನಾಟಕವು ಸಹಾ ಎದುರಿಸುತ್ತಿದ್ದು ಸಮಾಜದಲ್ಲಿ ಕೊರೋನ ಕಾಯಿಲೆಯು ಒಳಗೊಂಡಂತೆ ವಿಭಿನ್ನ ಕಾಯಿಲೆಗಳಿಗೆ ತುತ್ತಾಗಿರುವ ಸಾಕಷ್ಟು ರೋಗಿಗಳಿಗೆ ರಕ್ತದ ಅವಶ್ಯಕತೆಯಿದ್ದು ರಕ್ತ ನಿಧಿ ಕೇಂದ್ರಗಳಲ್ಲಿಯೂ ಸಹಾ ರಕ್ತದ ಅಭಾವವುಂಟಾಗುತ್ತಿರುವುದು ಸಹ ಸರ್ಕಾರದ ಗಮನಕ್ಕೆ ಬಂದ ವಿಷಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಮಾನ್ಯ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ರವರೊಂದಿಗೆ ನಡೆದ ವಿಡಿಯೋ ಕಾನ್ಫರೆನ್ಸಿಂಗ್ ಸಭೆಯಲ್ಲಿ ಆದೇಶಿಸಿ ಕವಿಪ್ರನಿನಿ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳೊಂದಿಗೆ ಸೂಕ್ತ ಸಮಾಲೋಜನೆ ನಡೆಸಿ ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳ ವಲಯ/ವಿಭಾಗಗಳ ಮಟ್ಟದಲ್ಲಿ ರೆಡ್‌ಕ್ರಾಸ್ ಸಂಸ್ಥೆಯ ಸಹಯೋಗದೊಂದಿಗೆ ಸ್ವಪ್ರೇರಣೆಯಿಂದ ರಕ್ತದಾನ ಮಾಡುವ ಆಸಕ್ತ ಅಧಿಕಾರಿ/ನೌಕರ ರಕ್ತದಾನಿಗಳಿಗೆ ರಕ್ತದಾನ ಶಿಬಿರವನ್ನು ಆಯೋಜಿಸಲು ಹಾಗೂ ರಕ್ತದಾನದ ವಿಷಯವಾಗಿ ಸಾಮಾಜಿಕ ಜಾಗೃತಿಯನ್ನು ಮೂಡಿಸುವಲ್ಲಿ ಕ್ರಮಕೈಗೊಳ್ಳುವಂತೆ ನಿರ್ದೇಶನವನ್ನ ನೀಡಿರುತ್ತಾರೆ.

..2

ಆದುದರಿಂದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ತನ್ನ ಅಧೀನ ಕಛೇರಿಗಳ ವ್ಯಾಪ್ತಿಯಲ್ಲಿ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಹಾಗೂ ಸರ್ಕಾರವು ತಿಳಿಸಿರುವಂತೆ ಅಗತ್ಯ ಸುರಕ್ಷತಾ ಕ್ರಮಗಳನ್ನು/ಮಾರ್ಗಸೂಚಿಗಳನ್ನು ಪಾಲಿಸುವುದರೊಂದಿಗೆ ರಕ್ತದಾನ ಶಿಬಿರಗಳನ್ನು ಏರ್ಪಡಿಸಲು ಕೂಡಲೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ತಿಳಿಸಲು ಈ ಮೂಲಕ ನಿರ್ದೇಶಿತನಾಗಿರುತ್ತೇನೆ.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ,
ರವರ ಅನುಮೋದನೆಯೊಂದಿಗೆ

ತಮ್ಮ ವಿಶ್ವಾಸಿ,

ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.)
ಕ.ವಿ.ಪ್ರ.ನಿ.ನಿ

ಪ್ರತಿಗಳು:

1) ಎಲ್ಲಾ ಮುಖ್ಯ ಇಂಜನಿಯರ್(ವಿ), ಕವಿಪ್ರನಿನಿ. /ವಿದ್ಯುತ್ ಸರಬರಾಜು ಕಂಪನಿಗಳು
2) ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ. /ವಿದ್ಯುತ್ ಸರಬರಾಜು ಕಂಪನಿಗಳು
3) ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)/(ಸಿಬ್ಬಂದಿ) ಮತ್ತು ಎಲ್ಲಾ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ./ ವಿದ್ಯುತ್ ಸರಬರಾಜು ಕಂಪನಿಗಳು.
5) ಅಧೀಕ್ಷಕ ಇಂಜನಿಯರ್ (ವಿ) ಕವಿಪ್ರನಿನಿ/ ವಿದ್ಯುತ್ ಸರಬರಾಜು ಕಂಪನಿಗಳು
6) ಕಾರ್ಯ ನಿರ್ವಾಹಕ ಇಂಜನಿಯರ್ (ವಿ), ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು
7) ನಿಗಮದ ಹಿರಿಯ ಆಪ್ತ ಕಾರ್ಯದರ್ಶಿಗಳು ಹಾಗೂ ಆಪ್ತ ಕಾರ್ಯದರ್ಶಿಗಳು- ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ತಾ)/ಪ್ರಸರಣ/ಹಣಕಾಸು/ಆ ಮತ್ತು ಮಾ.ಸಂ/ ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ ,/ಪಿ.ಸಿ.ಕೆ.ಎಲ್.
8) ಸಾರ್ವಜನಿಕ ಸಂಪರ್ಕಾಧಿಕಾರಿ ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರ ಮಾಹಿತಿಗಾಗಿ.
8) ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರ ಮಾಹಿತಿಗಾಗಿ.
9) ಎಲ್ಲಾ ವ್ಯವಸ್ಥಾಪಕರು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರ ಮಾಹಿತಿಗಾಗಿ
10) ಮುಖ್ಯ ಗುಮಾಸ್ತರು ರವರ ಮಾಹಿತಿಗಾಗಿ
11) ನಿಗಮದ ಹಿರಿಯ/ಕಿರಿಯ ವೈದ್ಯಾಧಿಕಾರಿಯವರುಗಳ ಗಮನಕ್ಕಾಗಿ.

ಮಾಹಿತಿಗಾಗಿ www.kptcl.com-->eprasarana ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.
ಪ್ರತಿಗಳು ಮಾಹಿತಿಗಾಗಿ:

12) ಶ್ರೀ ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ, ಬೆಂಗಳೂರು & ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಸ್ಕಾಂಗಳು.
13) ಶ್ರೀ ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜನಿಯರುಗಳ ಸಂಘ, ಬೆಂಗಳೂರು
14) ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
15) ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜನಿಯರುಗಳ ಸಂಘ, ಬೆಂಗಳೂರು.
16) ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
17) ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
18) ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮ ಇಂಜನಿಯರುಗಳ ಸಂಘ, ಬೆಂಗಳೂರು.
19) ಪ್ರಧಾನ ಕಾರ್ಯದರ್ಶಿ, ಕವಿಪ್ರನಿ/ಎಸ್ಕಾಂ ಪ.ಜಾ/ ಪ. ಪಂ ಅಧಿಕಾರಿಗಳ ಸಂಘ, ಬೆಂಗಳೂರು.